ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧೀಕಾರಿಗಳು,

**ಕಿತ್ತೂರ ಇವರ ನ್ಯಾಯಾಲಯದಲ್ಲಿ.**

**OS 34/2021**

| | | |
|---|---|---|
| ಸಾಕ್ಷಿದಾರರ ಹೆಸರು | - ರಾಮಪ್ಪ ಸುರೇಶ ದಳವಾಯಿ | **DW-02** |
| ವಯಸ್ಸು | - **31** ವರ್ಷ | ಪ್ರ.ವ.ಬೋ ದಿ**: 22.09.2025** |
| ಉದ್ಯೋಗ | - ತಾಲೂಕ ಸರ್ವೆಯರ | |
| ವಾಸ | - ಬೈಲಹೊಂಗಲ | |

**<u>ಮುಖ್ಯ ವಿಚಾರಣೆಃ ಪ್ರತಿವಾದಿಗಳ ಪರ ವಕೀಲರಿಂದಃ</u>**

ನಾನು ತಾಲೂಕ ಸರ್ವೆಯರ ಅಂತಾ **2023** ರಿಂದ ಇಲ್ಲಿಯವರೆಗೆ ಕಿತ್ತೂರ ತಾಲೂಕಾ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ದಾವೆಯಲ್ಲಿ ನ್ಯಾಯಾಲಯದ ಆದೇಶದಂತೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸರ್ವೆ ಮಾಡಿ ವಿವರವಾದ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಸದರಿ ವರದಿಯನ್ನು ಹಾಗೂ ಅದರೊಂದಿಗೆ ಇರುವ ಲಗತ್ತುಗಳನ್ನು **(1** ರಿಂದ **27** ಪುಟಗಳುಳ್ಳ ವರದಿ**)** ಯನ್ನು ಈಗ **ನಿಡಿ 25** ಎಂದು ಹಾಗೂ ಸದರಿ ವರದಿಯಲ್ಲಿರುವ ಸಾಕ್ಷಿಯು ಸಹಿಯನ್ನು **ನಿಡಿ 25 (ಎ)** ಮತ್ತು ಸರ್ವೆ ನಕಾಶೆಯಲ್ಲಿರುವ ಸಾಕ್ಷಿಯ ಸಹಿಯನ್ನು **ನಿಡಿ 25 (ಬಿ)** ಎಂದು ಗುರುತಿಸಲಾಯಿತು. ನಿಡಿ **25** ರ ಜೊತೆ ಇರುವ ನಕಾಶೆಯನ್ನು ನಾನೇ ತಯಾರಿಸಿ ಅದಕ್ಕೆ ನಿಡಿ **25 (**ಬಿ**)** ರಂತೆ ಸಹಿ ಮಾಡಿರುತ್ತೇನೆ. ಸದರಿ ನಕಾಶೆಯಲ್ಲಿ **2**ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದ **4** ಎಕರೆ ಜಾಗವನ್ನು **P Q R S T U** ಅಂತಾ ತೋರಿಸಿರುತ್ತೇನೆ. ಸದರಿ ನಕಾಶೆಯಲ್ಲಿ ವಾದಿಯ ತಮ್ಮದು ಎಂದು

ಹೇಳಲಾದ ಜಾಗವನ್ನು **ABCDEFG** ಅಂತಾ ತೋರಿಸಿದ್ದು ಅದು ಸಹ **2**ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದ ಜಾಗದಲ್ಲಿಯೇ ಇರುತ್ತದೆ. **ABCDEFG** ರಂತೆ ಇರುವ ಜಾಗವು ವಾದಿಯದ್ದು ಇರುತ್ತದೆ ಎಂದು ತೋರಿಸಲು ನಮ್ಮ ಇಲಾಖೆಯಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ. ಸರ್ಕಾರದಿಂದ **2**ನೇ ಪ್ರತಿವಾದಿಗೆ ಮಂಜೂರಾದ ಸರ್ವೇ ನಂ. **87/**ಅ ರಲ್ಲಿ **4** ಎಕರೆ ಜಾಗವು **NA** ಅಂತಾ ಆಗಿರುವುದಿಲ್ಲ. **ABCDEFG** ಅಂತಾ ತೋರಿಸಿದ ಜಾಗದಲ್ಲಿ ಯಾವುದೇ ಕಟ್ಟಡವಾಗಲೀ ಅಥವಾ ಕಟ್ಟಡದ ಕುರುಹುಗಳಾಗಿ ಇರವುದಿಲ್ಲ.

**ಪಾಟೀ ಸವಾಲುಃ**

**ವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ, ಆಲಿಸಿ ಸಮಯವನ್ನು ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

**ಪ್ರ.ದ.ನ್ಯಾ.ದಂ. ಕಿತ್ತೂರು.**